# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 09/ಸಭೆ/ಪಿಆರ್/ /2021-22 ದಿನಾಂಕ : 05/02/2022

**<u>ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 09 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 05/02/2022 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು</u>**

**<u>ಹಾಜರಿದ್ದ ಅಧಿಕಾರಿ /ನೌಕರರು</u>**

1. ಶ್ರೀ ಶಿವಕುಮಾರ್ ಮುತ್ತುಸ್ವಾಮಿ ಗೌಡರ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ
2. ಶ್ರೀ ಸೋಮಶೇಖರ್ ಜಿ.ಎಲ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಕು॥ ಧನಲಕ್ಷ್ಮಿ, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ
4. ಶ್ರೀ ಪಿ.ಎಂ ಮಲಯಾದ್ರಿ, ಕೆಲಸ ಪರಿವೀಕ್ಷಕರು, ತೋಟಗಾರಿಕೆ
5. ಶ್ರೀ ಭಾರ್ಗವ ಪಿ.ಎನ್, ಕಿರಿಯ ಆರೋಗ್ಯ ಪರಿವೀಕ್ಷಕರು
6. ಶ್ರೀ ಸಿದ್ದರಾಜು, ಕಿರಿಯ ಆರೋಗ್ಯ ಪರಿವೀಕ್ಷಕರು

**<u>ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು</u>**

1. ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು
2. ಸಾರ್ವಜನಿಕರು

**ಶ್ರೀ ಸೋಮಶೇಖರ್ ಜಿ.ಎಲ್, ಸಹಾಯಕ ಅಭಿಯಂತರರು:-** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು.

**ನೋಡೆಲ್ ಅಧಿಕಾರಿ** ರವರು ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

**ವಸತಿ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು**

ವಿದ್ಯಾರಣ್ಯಪುರ ವ್ಯಾಪ್ತಿಯ ಜ್ಞಾನೇಶ್ವರಿ ಬಡಾವಣೆ, ಟೆಲಿಕಾಂ ಬಡಾವಣೆ, ವಿರೂಪಾಕ್ಷಪುರ, ಸರ್.ಎಂ.ವಿ ಲೇಔಟ್‌ನಲ್ಲಿ ಹಲವಾರು ಒಣಗಿದ ಮರಗಳು ಶಿಥಿಲಾವಸ್ಥೆಯಲ್ಲಿದ್ದರೂ ಸಹ ಮರಗಳನ್ನು ಕತ್ತರಿಸದೆ ಹಾಗೆಯೇ ಬಿಟ್ಟಿರುತ್ತಾರೆ ಇದರಿಂದ ಮರದ ರೆಂಬೆ ಕೊಂಬೆಗಳು ಯಾರ ತಲೆ ಮೇಲೆ ಬೇಕಾದರೂ ಬೀಳುವ ಸಂಭವವಿರುತ್ತದೆ ಆದ್ದರಿಂದ ತಪಾಸಣೆ ಮಾಡಿ ಕ್ರಮ ಕೈಗೊಳ್ಳಲು ಕೋರಿದರು.

**ಕ್ರಮ: ಉಪ ಅರಣ್ಯ ವಲಯ ಸಂರಕ್ಷಣಾಧಿಕಾರಿ, ಬ್ಯಾಟರಾಯನಪುರ**

ಜಿ.ಕೆ.ವಿ.ಕೆ ರಿಂಗ್ ರಸ್ತೆಯಲ್ಲಿ ಎಷ್ಟು ಬಾರಿ ತ್ಯಾಜ್ಯವನ್ನು ತೆರವುಗೊಳಿಸಿದರೂ ಪುನ: ಪುನ: ಕಸವನ್ನು ಎಸೆದು ಹೋಗುತ್ತಿರುವುದರಿಂದ ಮತ್ತೆ ಕಸದ ರಾಶಿ ಹರಡಿರುತ್ತದೆ. ಆದ್ದರಿಂದ ಸದರಿ ಸ್ಥಳದಲ್ಲಿ ಮಾರ್ಷಲ್‌ಗಳನ್ನು ನಿಯೋಜಿಸಿ ಕಸ ಎಸೆದು ಹೋಗುತ್ತಿರುವವರಿಗೆ ದಂಡ ವಿಧಿಸಲು ಕೋರಿರುತ್ತಾರೆ.

**ಕ್ರಮ: ಸಕಾಲ, ಘ.ತ್ಯಾ.ನಿ**

ಹೆಚ್.ಎಂ.ಟಿ ಬಡಾವಣೆಯಲ್ಲಿ 4 ದಿವಸಗಳಿಗೊಮ್ಮೆ ನೀರು ಪೂರೈಕೆಯಾಗುತ್ತಿದ್ದು, ಇತ್ತೀಚೆಗೆ ನೀರಿನ ಪೂರೈಕೆಯಲ್ಲಿ ಅಸ್ತವ್ಯಸ್ತವಾಗಿರುವುದರಿಂದ ಬಡಾವಣೆಯ ನಿವಾಸಿಗಳಿಗೆ ತುಂಬಾ ತೊಂದರೆ ಉಂಟಾಗುತ್ತಿದ್ದು, ಸಮರ್ಪಕವಾಗಿ ನೀರನ್ನು ಪೂರೈಸಲು ಕೋರಿದರು.

ನೀರು ಸರಿಯಾಗಿ ಪೂರೈಕೆಯಾಗದಿದ್ದರೂ ಸಹ ನೀರಿನ ಬಿಲ್ ಹೆಚ್ಚಾಗಿ ಬರುತ್ತದೆಂದು ದೂರಿದರು.

**ಕ್ರಮ: ಸಕಾಅ ಬಿಡಬ್ಲ್ಯೂಎಸ್ಎಸ್‌ಬಿ**

ತಿಂಡ್ಲು, ಗುರುದರ್ಶನ್ ಲೇಔಟ್, ಜ್ಞಾನೇಶ್ವರಿ ಬಡಾವಣೆಗಳ ಚರಂಡಿಯಲ್ಲಿ ತುಂಬಿರುವ ಹೂಳು ಮತ್ತು ಮಣ್ಣನ್ನು ತೆರವುಗೊಳಿಸಲು ಕೋರಿದರು.

**ಕ್ರಮ: ಸ.ಕಾ.ಅ, ವಿ.ಉ.ವಿ**

ತಿಂಡ್ಲು, ಎ.ಕೆ ಕಾಲೋನಿ ಸರ್ಕಾರಿ ಆಸ್ಪತ್ರೆ ಹಿಂಭಾಗದ ರಾಜಕಾಲುವೆಯಲ್ಲಿ ತುಂಬಿರುವ ಹೂಳನ್ನು ತೆರವುಗೊಳಿಸಲು ಕೋರಿದರು.

**ಕ್ರಮ: ಸಕಾಅ, ಬೃ.ನೀ.ಗಾ**

ನರಸೀಪುರ ಬಡಾವಣೆ, 8ನೇ ಅಡ್ಡರಸ್ತೆಯಲ್ಲಿ, ಹೆಚ್.ಎಂ.ಟಿ ಬಡಾವಣೆ, 2ನೇ ಬ್ಲಾಕ್ 3ನೇ ಅಡ್ಡರಸ್ತೆ, ಮನೆ ನಂ 140 ರ ಮುಂಭಾಗ ಬೀದಿ ದೀಪಗಳನ್ನು ಸರಿಪಡಿಸಲು ಕೋರಿದರು.

**ಕ್ರಮ: ಸ.ಕಾ.ಅ, ವಿದ್ಯುತ್**

ವಿದ್ಯಾರಣ್ಯಪುರ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚಾಗಿದ್ದು, 4-5 ಜನಗಳಿಗೆ ನಾಯಿ ಕಚ್ಚಿರುತ್ತದೆಂದು ದೂರು ನೀಡಿದರು.

**ಕ್ರಮ: ಜಾನುವಾರು ಅಧಿಕಾರಿ, ಪಶುಪಾಲನೆ**

ಪ್ರತಿ ವಾರ್ಡ್ ಸಮಿತಿ ಸಭೆಗೆ ಅಧಿಕಾರಿಗಳು ಹಾಜರಾಗದೆ ಇರುವುದರಿಂದ ವಾರ್ಡ್‌ನ ಕುಂದುಕೊರತೆಗಳನ್ನು ಬಗೆಹರಿಸಲು ಕಷ್ಟಕರವಾಗುತ್ತದೆ, ಅಧಿಕಾರಿಗಳು ಹಾಜರಾಗದೆ ಸಮಸ್ಯ ಬಗೆಹರಿಯುವುದಿಲ್ಲ, ಸಮಸ್ಯ ಬಗೆಹರಿಯದ ಪಕ್ಷದಲ್ಲಿ ವಾರ್ಡ್ ಸಮತಿ ಸಭೆ ಮಾಡಿ ಪ್ರಯೋಜನವಿರುವುದಿಲ್ಲ ಆದ್ದರಿಂದ ಎಲ್ಲಾ ಇಲಾಖೆಯ ಅಧಿಕಾರಿಗಳ ವಾರ್ಡ್ ಸಮಿತಿ ಸಭೆಗೆ ಕಡ್ಡಾಯವಾಗಿ ಹಾಜರಾಗಲು ಕೋರಿದರು.

**ನೋಡೆಲ್ ಅಧಿಕಾರಿ:** ಶ್ರೀ ಶಿವಕುಮಾರ್ ಗೌಡರ್ ರವರು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 09, ವಿದ್ಯಾರಣ್ಯಪುರ

ನೋಡೆಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು
ವಿದ್ಯಾರಣ್ಯಪುರ ಉಪವಿಭಾಗ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.